INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,36- 45
Peer Reviewed Journal, Referred Journal

# ಮಾನವ ಹಕ್ಕುಗಳ ರಕ್ಷಣೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಗಳ ಪಾತ್ರ ಕುರಿತ ಸ್ಥೂಲನೋಟ

**ಡಾ.ಎಂ.ರಾಚಪ್ಪಾಜಿ.**[1]

ಮಾನವ ಹಕ್ಕುಗಳನ್ನು ಭಾರತ ಸಂವಿಧಾನದಲ್ಲಿ ಅಡಕವಾಗಿರುವಂಥ ಹಲವು ವಿಧಿಗಳು ಸಂರಕ್ಷಿಸುತ್ತವೆ. ಅವುಗಳನ್ನು ಆಧರಿಸಿ ಕೆಲವು ಇತರ ಕ್ರಮಗಳನ್ನು ಕಾಲಕಾಲಕ್ಕೆ ಸಂಸತ್ತು ತೆಗೆದುಕೊಂಡಿರುತ್ತದೆ. ಹಾಗೆಯೇ ಹಲವು-ಹತ್ತು ಪ್ರಕರಣಗಳು ಸಂವಿಧಾನದ ರಕ್ಷಕವಾಗಿರುವ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಿರುತ್ತವೆ. ಅವುಗಳನ್ನು ಪರಿಶೀಲಿಸಿ ತೀರ್ಪುಗಳು ಹಾಗೂ ಸಲಹೆಗಳನ್ನು ಸಂಸತ್ತಿಗೆ ನೀಡಿರುತ್ತದೆ. ಹಾಗಾಗಿ ಭಾರತದ ಸಂಸತ್ತು ಮಾನವ ಹಕ್ಕುಗಳ ರಕ್ಷಣೆಯಲ್ಲಿ ಕಾಯಿದೆಗಳ ಅನ್ವಯ ರಚಿತವಾಗಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ರಾಷ್ಟ್ರೀಯ ಆಯೋಗಗಳ ಕಾರ್ಯಗಳನ್ನು ಕೂಡ ದಾಖಲಿಸಲಾಗಿದೆ.

**ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ (ಎನ್‌ಸಿಎಸ್‌ಸಿ) 1992ನೇ ಮಾರ್ಚ್ 12**

ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗವು ಭಾರತೀಯ ಸಂವಿಧಾನಿಕ ಸಂಸ್ಥೆಯಾಗಿದ್ದು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ವ್ಯಾಪ್ತಿಗೆ ಒಳಪಡುತ್ತದೆ. ಇದು ಪರಿಶಿಷ್ಟ ಜಾತಿಗಳು ಮತ್ತು ಆಂಗ್ಲೋ ಇಂಡಿಯನ್ ಜನಸಮುದಾಯಗಳನ್ನು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಉತ್ತೇಜಿಸಲು ಹಾಗೂ ರಕ್ಷಿಸಲು ಅವರ ಶೋಷಣೆಯ ವಿರುದ್ಧ ರಕ್ಷಣೆಯನ್ನು ಒದಗಿಸುವ ದೃಷ್ಟಿಯಿಂದ ಸ್ಥಾಪಿಸಲಾಗಿದೆ. ಪರಿಶಿಷ್ಟ ಜಾತಿಗಳ ಸಂರಕ್ಷಣೆಗಾಗಿ ಭಾರತೀಯ ಸಂವಿಧಾನದಲ್ಲಿ ಆರ್ಥಿಕ ಮತ್ತು ಸಾಂಸ್ಕೃತಿಕ ಹಿತಾಸಕ್ತಿಗಳನ್ನು ಹೀಗೆ ವಿಶೇಷ ನಿಬಂಧನೆಗಳನ್ನು ಒಳಗೊಂಡಂತೆ ಹಲವು-ಹತ್ತು ವಿಧಿ-ವಿಧಾನಗಳನ್ನು ನೀಡಲಾಗಿದೆ. ಅವುಗಳನ್ನು ರಕ್ಷಿಸುವಲ್ಲಿ 338ನೇ ವಿಧಿಯು ನೇರವಾಗಿಯೇ ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗವನ್ನು ಸ್ಥಾಪಿಸಲು ಪ್ರಸ್ತಾಪಿಸಿರುತ್ತದೆ. ಅದರಂತೆ 1992ನೇ ಮಾರ್ಚ್ 12ರಂದು ಒಂದು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗವು ರಚಿತಗೊಂಡಿರುತ್ತದೆ. ಈ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿ ತನ್ನದೇ ಆದಂಥ ಕಾರ್ಯವನ್ನು ನಿರ್ವಹಿಸಿ

[1].ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ಪರಿಶಿಷ್ಟ ಜಾತಿಯ ಜನವರ್ಗಗಳ ಮಾನವ ಹಕ್ಕುಗಳನ್ನು ರಕ್ಷಿಸುತ್ತಿರುವುದು ಮಹತ್ವದ ಸಂಗತಿಯೇ ಆಗಿರುತ್ತದೆ.

**ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ನೇಮಕಾತಿ**

ಮೂಲತಃ ಭಾರತೀಯ ಸಂವಿಧಾನದ 335ನೇ ವಿಧಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಿಶೇಷ ಅಧಿಕಾರಿಯನ್ನು ನೇಮಕ ಮಾಡುವುದು. ಆ ಅಧಿಕಾರಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಂವಿಧಾನಿಕ ಸುರಕ್ಷತೆಗೆ ಸಂಬಂಧಿಸಿದಂಥ ಎಲ್ಲಾ ವಿಷಯಗಳ ಬಗೆಗೆ ತನಿಖೆ ನಡೆಯುವುದು ಮತ್ತು ಅದರ ಕಾರ್ಯವೈಖರಿಯ ಬಗೆಗೆ ರಾಷ್ಟ್ರಾಧ್ಯಕ್ಷರಿಗೆ ವಿಸ್ತೃತವಾದಂಥ ವರದಿಯನ್ನು ಒದಗಿಸುವುದು. ಹಗೆಯೇ ಒಬ್ಬ ಆಯುಕ್ತರನ್ನು ನೇಮಕ ಮಾಡುವ ಮೂಲಕ ಈ ಜನವರ್ಗಗಳ ಹಿತರಕ್ಷಣೆಗಾಗಿ ಕರ್ತವ್ಯವನ್ನು ನಿರ್ವಹಿಸಲು ಸೂಚಿಸಿರುತ್ತದೆ. 1978ರಲ್ಲಿ ಸರ್ಕಾರವು ಒಂದು ನಿರ್ಣಾಯದ ಮೂಲಕ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಶಾಸನಬದ್ಧವಿಲ್ಲದ ಬಹುಸದಸ್ಯ ಆಯೋಗವೊಂದನ್ನು ಸ್ಥಾಪಿಸಿತು. ಆದ್ದರಿಂದಲೇ ಒಂದು ಆಯುಕ್ತರ ಕಛೇರಿಯೂ ಕೂಡ ಭಾರತದಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. 1957ರಲ್ಲಿ ಸರ್ಕಾರವು ಮತ್ತೊಂದು ನಿರ್ಣಾಯದ ಮೂಲಕ ಈ ಆಯೋಗದ ಕಾರ್ಯಗಳನ್ನು ಮಾರ್ಪಡಿಸಿತು. ಹಾಗೆಯೇ ಅದನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವೆಂದು ಮರುನಾಮಕರಣವನ್ನು ಮಾಡಿರುತ್ತದೆ.

1990ರಲ್ಲಿ ಸಂವಿಧಾನಕ್ಕೆ ಅಂದಿನ ಕೇಂದ್ರ ಸರ್ಕಾರವು 65ನೇ ತಿದ್ದುಪಡಿ ಕಾಯಿದೆಯನ್ನು ಜಾರಿಗೆ ತರುವ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಏಕ ವಿಶೇಷಾಧಿಕಾರಿಯ ಸ್ಥಾನದಲ್ಲಿ ಉನ್ನತ ಮಟ್ಟದ ಬಹುಸದಸ್ಯ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಲು ಅವಕಾಶವನ್ನು ಒದಗಿಸಿಕೊಡಲಾಗಿದೆ. 1987ರ ನಿರ್ಣಯದ ಅಡಿಯಲ್ಲಿ ಸ್ಥಾಪಿಸಲಾಗಿದ್ದಂಥ ಪರಿಶಿಷ್ಟಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯುಕ್ತರನ್ನು ಈ ಶಾಸನಬದ್ಧ ಸಂಸ್ಥೆಯು ಬದಲಾಯಿಸಿರುತ್ತದೆ. ಮತ್ತೇ, 2003ರಲ್ಲಿ ಭಾರತೀಯ ಸಂವಿಧಾನದ 89ನೇ ತಿದ್ದುಪಡಿಯ ಕಾಯಿದೆಯ ಅನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಯೋಜಿತ ರಾಷ್ಟ್ರೀಯ ಆಯೋಗವನ್ನು ಎರಡು ಪ್ರತ್ಯೇಕವಾದಂಥ ಸಂಸ್ಥೆಗಳಾಗಿ ವಿಂಗಡಿಸಲಾಗಿರುತ್ತದೆ. ಅವುಗಳೆಂದರೆ; **ಸಂವಿಧಾನದ 338ನೇ ವಿಧಿಯ ಪ್ರಕಾರ; ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ. ಸಂವಿಧಾನದ 338–ಎ ವಿಧಿಯ ಪ್ರಕಾರ; ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ.** 2004ರಲ್ಲಿ ರಾಷ್ಟ್ರ ಮಟ್ಟದಲ್ಲಿ ಪರಿಶಿಷ್ಟ ಜಾತಿಗಳಾಗಿಯೇ ಪ್ರತ್ಯೇಕವಾದಂಥ ಒಂದು ರಾಷ್ಟ್ರೀಯ ಆಯೋಗವು ಅಸ್ಥಿತ್ವಕ್ಕೆ ಬಂದಿರುತ್ತದೆ. ಈ ಆಯೋಗದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಇತರ ಮೂವರು ಸದಸ್ಯರನ್ನು ಒಳಗೊಂಡಿರುತ್ತದೆ.

ಅಧ್ಯಕ್ಷರನ್ನು ತಮ್ಮ ಕೈ ಮತ್ತು ಮುದ್ರೆ ಅಡಿಯಲ್ಲಿ ವಾರೆಂಟ್ ಮೂಲಕ ಕೇಂದ್ರ ಸರ್ಕಾರವು ನೇಮಕಮಾಡುತ್ತದೆ. ಅಧ್ಯಕ್ಷರು ಆಯೋಗದ ಸೇವಾ ಪರಿಸ್ಥಿತಿಗಳು ಮತ್ತು ಅಧಿಕಾರ ಅವಧಿಯನ್ನು ನಿರ್ಧರಿಸುತ್ತಾರೆ ಎಂದು ಸೂಚಿಸಿರುತ್ತದೆ.

**ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ಅಧಿಕಾರಗಳು**

ಪರಿಶಿಷ್ಟ ಜಾತಿಗಳ ರಕ್ಷಣೆಗಾಗಿಯೇ ಸಂವಿಧಾನದ 338ನೇ ವಿಧಿಅನ್ವಯ ನೇರವಾಗಿ ಸ್ಥಾಪಿತಗೊಂಡಿರುವಂಥ ಈ ರಾಷ್ಟ್ರೀಯ ಆಯೋಗವು ತನ್ನದೇ ಆದಂಥ ಹತ್ತು–ಹಲವು ಅಧಿಕಾರಗಳನ್ನು ಹೊಂದಿರುತ್ತದೆ. ಅವುಗಳೆಂದರೆ; ಆಯೋಗವು ತನ್ನದೇ ಆದಂಥ ಕಾರ್ಯವಿಧನವನ್ನು ನಿಯಂತ್ರಿಸುವ ಅಧಿಕಾರವನ್ನು ಹೊಂದಿದೆ. ಆಯೋಗವು ಯಾವುದೇ ವಿಷಯದ ಬಗೆಗೆ ತನಿಖೆ ನಡೆಸುವಾಗ ಅಥವಾ ಯಾವುದೇ ದೂರನ್ನು ವಿಚಾರಿಸುವಾಗ, ನಾಟಕ ನ್ಯಾಯಾಲಯದ ಮಾದರಿಯಲ್ಲಿ ಎಲ್ಲಾ ಅಧಿಕಾರಗಳನ್ನು ಮೊಕದ್ದಮೆ ಹೂಡಲು ಮತ್ತು ನಿರ್ದಿಷ್ಟವಾಗಿ ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಹೊಂದಿರುತ್ತದೆ. ಅವುಗಳೆಂದರೆ;

1. ಭಾರತ ದೇಶದ ಯಾವುದೇ ಭಾಗದಿಂದ ಯಾವುದೇ ವ್ಯಕ್ತಿಯ ಹಾಜರಾತಿಯನ್ನು ಕರೆದು ಜಾರಿಗೊಳಿಸುವುದು ಮತ್ತು ಆತನ ಪ್ರಮಾಣವಚನವನ್ನು ಪರೀಕ್ಷಿಸುವುದು.
2. ಯಾವುದೇ ಅಗತ್ಯ ದಾಖಲೆಗಳ ಉತ್ಪಾದನೆ ಮತ್ತು ಆವಿಷ್ಕಾರ ಮಾಡುವುದು.
3. ಅಫಿಡೆವಿಟ್‌ಗಳಲ್ಲಿ ಸಾಕ್ಷ್ಯಗಳನ್ನು ಪಡೆಯುವುದು.
4. ಯಾವುದೇ ನ್ಯಾಯಾಲಯ ಅಥವಾ ವೇದಿಕೆಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಕೋರುವುದು.
5. ಸಾಕ್ಷಿಗಳು ಮತ್ತು ದಾಖಲೆಗಳ ಪರೀಕ್ಷೆಗಳ ಸಮನ್ಸ್‌ನ್ನು ಜಾರಿಗೊಳಿಸುವುದು.
6. ಅಧ್ಯಕ್ಷರು ನಿರ್ಧರಿಸಬಹುದಾದ ಯಾವುದೇ ವಿಷಯದ ಬಗೆಗೆ ತನಿಖೆ ನಡೆಸುವುದು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಿಶಿಷ್ಟ ಜಾತಿಗಳ ಮೇಲೆ ಪರಿಣಾಮ ಬೀರುವಂಥ ಪ್ರತಿಯೊಂದು ಪ್ರಮುಖ ನೀತಿ ವಿಷಯಗಳ ಬಗೆಗೆ ಈ ರಾಷ್ಟ್ರೀಯ ಆಯೋಗವನ್ನು ಸಂಪರ್ಕಿಸಬೇಕಾಗುತ್ತದೆ. ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದಂತೆ ಇತರ ಹಿಂದುಳಿದ ಜನವರ್ಗಗಳು ಮತ್ತು ಆಂಗ್ಲೋ–ಇಂಡಿಯನ್ ಸಮುದಾಯಕ್ಕೆ ಸಂಬಂಧಿಸಿದಂತೆ ಇದೇ ರೀತಿಯ ಕಾರ್ಯಗಳನ್ನು ನಿರ್ವಹಿಸಲು ಆಯೋಗದ ಅಗತ್ಯವಿದೆ. ಹಾಗೆಯೇ, ಬೇರೆ ರೀತಿಯಲ್ಲಿ ಹೇಳುವುದಾದರೆ; ಈ ರಾಷ್ಟ್ರೀಯ ಆಯೋಗವು ಇತರ ಹಿಂದುಳಿದ ವರ್ಗಗಳು ಮತ್ತು ಆಂಗ್ಲೋ–ಇಂಡಿಯನ್ ಸಮುದಾಯಗಳ ಸಾಂವಿಧಾನಿಕ ಮತ್ತು ಇತರ ಕಾನೂನು ಸುರಕ್ಷತೆಗಳಿಗೆ ಸಂಬಂಧಿಸಿದ ಪ್ರತಿಯೊಂದು ವಿಷಯಗಳ ಬಗೆಗೆ

ತನಿಖೆಯನ್ನು ನಡೆಸಬೇಕು. ಆಯೋಗವು ತನ್ನ ಕೆಲಸ ಕಾರ್ಯವನ್ನು ನಿರ್ವಹಿಸಿದ ಅನಂತರ ರಾಷ್ಟ್ರಾಧ್ಯಕ್ಷರಿಗೆ ಒಂದು ವಿಸ್ತೃತ ಗುಣಮಟ್ಟದ ವರದಿಯನ್ನು ನೀಡಬೇಕು.

**ಆಯೋಗದ ಕಾರ್ಯಗಳು ಮತ್ತು ಜವಾಬ್ದಾರಿಗಳು**

ರಾಷ್ಟ್ರೀಯ ಆಯೋಗವು ತನ್ನ ಕಾರ್ಯವಿಧಾನದ ಸಂದರ್ಭದಲ್ಲಿ ಕೆಲವು ಕಾರ್ಯಗಳು ಹಾಗೂ ಜವಾಬ್ದಾರಿಗಳನ್ನು ವಿಶಿಷ್ಟರೀತಿಯಲ್ಲಿ ಹೊಂದಿರುತ್ತದೆ. ಅವುಗಳೆಂದರೆ; ಪರಿಶಿಷ್ಟ ಜಾತಿಗಳಿಗೆ ಸಾಂವಿಧನಿಕವಾಗಿ ಹಾಗೂ ಇತರ ಕಾನೂನುಬದ್ಧವಾಗಿ ನೀಡಲಾಗಿರುವಂತ ಸಂರಕ್ಷಣೆಗಳಿಗೆ ಸಂಬಂಧಿಸಿದಂಥ ಪ್ರತಿಯೊಂದು ವಿಷಯಗಳ ಬಗೆಗೆ ತನಿಖೆ ಮತ್ತು ಮೇಲ್ವಿಚಾರಣೆಯನ್ನು ಮಾಡುವುದು ಹಾಗೆಯೇ, ಅವರ ಕಾರ್ಯವನ್ನು ಕೂಡ ಮೌಲ್ಯಮಾಪನ ಮಾಡುವುದು. ಪರಿಶಿಷ್ಟ ಜಾತಿಗಳ ಹಕ್ಕುಗಳ ಅಭಾವ ಮತ್ತು ಸುರಕ್ಷತೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟವಾದಂತ ಎದುರುಗಳನ್ನು ವಿಚಾರಿಸುವುದು. ಪರಿಶಿಷ್ಟ ಜಾತಿಗಳ ಸಾಮಾಜಿಕ–ಆರ್ಥಿಕ ಅಭಿವರದ್ಧಿಯ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮತ್ತು ಸಲಹೆ ನೀಡಲು ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಡಿಯಲ್ಲಿ ಅವರ ಅಭಿವೃದ್ಧಿಯ ಪ್ರಗತಿಯನ್ನು ಸ್ಥೂಲವಾಗಿ ಮೌಲ್ಯಮಾಪನವನ್ನು ಮಾಡುವುದು. ರಾಷ್ಟ್ರಾಧ್ಯಕ್ಷರಿಗೆ ಪ್ರಸ್ತುತಪಡಿಸಲು ವಾರ್ಷಿಕವಾಗಿ ಮತ್ತು ಅದು ಸೂಕ್ತವೆಂದು ಭಾವಿಸುವಂಥ ಇತರ ಸಮಯಗಳಲ್ಲಿ ಪರಿಶಿಷ್ಟ ಜಾತಿಗಳ ಸುರಕ್ಷತೆಗಳ ಕಾರ್ಯದ ಬಗೆಗೆ ವರದಿಗಳನ್ನು ಸಲ್ಲಿಸುವುದು. ಪರಿಶಿಷ್ಟ ಜಾತಿಗಳ ರಕ್ಷಣ ಕಲ್ಯಾಣ ಮತ್ತು ಸಾಮಾಜಿಕ–ಆರ್ಥಿಕ–ಅಭಿವೃದ್ಧಿಗೆ ಆ ಸುರಕ್ಷತೆಗಳು ಮತ್ತು ಇತರ ಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರವೂ ತೆಗೆದುಕೊಳ್ಳಬೇಕಾದಂಥ ಕಾರ್ಯವಿಧಾನ ಹಾಗೂ ಕ್ರಮಗಳ ಬಗೆಗೆ ಶಿಫಾರಸ್ಸುಗಳನ್ನು ಮಾಡುವುದು. ಮತ್ತು ಪರಿಶಿಷ್ಟ ಜಾತಿಗಳ ರಕ್ಷಣೆ, ಕಲ್ಯಾಣ, ಅಭಿವೃದ್ಧಿ ಹಾಗೂ ಪ್ರಗತಿಗೆ ಸಂಬಂಧಿಸಿದಂತೆ ಇರುವ ಇಂಥ ಕಾರ್ಯಗಳನ್ನು ಅಧ್ಯಕ್ಷರು ಸೂಚಿಸಬಹುದು ಅಥವಾ ನಿರ್ಧರಿಸಬಹುದು. ಈ ರೀತಿಯಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗವು ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಈ ಅಧ್ಯಯನದಲ್ಲಿ ಪ್ರಧಾನವಾಗಿ ಚರ್ಚಿಸಲಾಗಿರುತ್ತದೆ.

**ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ – 2003ನೇ ಸೆಪ್ಟಂಬರ್ 30**

ಭಾರತದಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಎರಡು ಒಂದು ನಾಣ್ಯದ ಎರಡು ಮುಖಗಳು ಇದ್ದಂತೆ. ಪರಿಶಿಷ್ಟ ಜಾತಿಗಳು ವ್ಯವಸ್ಥೆಯಗಳಿಗೆ ಬದುಕಿದರೆ, ಪರಿಶಿಷ್ಟ ಪಂಗಡಗಳು ವ್ಯವಸ್ಥೆ ಮತ್ತು ಕಾಡು–ಮೇಡು–ಅಂಚಿನಲ್ಲಿ ಬದುಕುತ್ತಿದ್ದಿರುವುದನ್ನು ಇದಂದಿಗೂ ಕೂಡ ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಸಂವಿಧಾನದ ಸೃಷ್ಟಿಕರ್ತರು ಈ ಎರಡು ಜನವರ್ಗಗಳನ್ನು ಸಮಾನಾಂತರ ನೆಲೆಗಳಲ್ಲಿಯೇ ನೋಡುವ ಮೂಲಕ ಹಲವು ವಿಧಿಗಳ ಹಾಗೂ ಕಾನೂನಿನಲ್ಲಿ ಸಂರಕ್ಷಣೆಯನ್ನು ಒದಗಿಸಿಕೊಟ್ಟಿದ್ದಾರೆ.

ಅಂಥ ಒಂದು ಭಾಗವೇ ಈ ರಾಷ್ಟ್ರೀಯ ಆಯೋಗದ ರಚನೆಯೇ ಆಗಿದೆ. ಪರಿಶಿಷ್ಟ ಪಂಗಡಗಳ ಸಮಷ್ಠಿ ಹಿತವನ್ನು ಕಾಯುವಂತೆ ಸಂವಿಧಾನದಲ್ಲಿ ಹಲವು-ಹತ್ತು ಸಂರಕ್ಷಣಾ ವಿಧಿಗಳನ್ನು ಅಳವಡಿಸಲಾಗಿದೆ. ಹಾಗೆಯೇ ಸಂವಿಧಾನದ 338ನೇ ವಿಧಿಯನ್ನು ಈ ತಿದ್ದುಪಡಿಯ ಮೂಲಕ ಅಳವಡಿಸಲಾಗಿರುತ್ತದೆ. ಹಾಗೆಯೇ 2004ನೇ ಫೆಬ್ರವರಿ 19ರಂದು 333ಎ ಎಂಬ ಹೊಸ ವಿಧಿಯೊಂದನ್ನು ಜಾರಿಗೆ ತರಲಾಗಿರುತ್ತದೆ. ಹಾಗೆಯೇ, ಪರಿಶಿಷ್ಟ ಪಂಗಡಗಳ ಸಂರಕ್ಷಣಾ ಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗಿರುತ್ತದೆ. ಆದ್ದರಿಂದಲೇ ಸಂವಿಧಾನದ 333ಎ ವಿಧಿಯ ಅನ್ವಯ ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗವನ್ನು ರಚಿಸಲಾಗಿರುತ್ತದೆ. ಈ ಆಯೋಗವು ಒಬ್ಬ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮೂರು ಜನ ಪೂರ್ಣ ಪ್ರಮಾಣದ ಸದಸ್ಯರುಗಳನ್ನು ಒಳಗೊಂಡಿರುತ್ತದೆ. (ಇದರಲ್ಲಿ ಒಬ್ಬ ಮಹಿಳಾ ಸದಸ್ಯರನ್ನು) ಈ ಆಯೋಗದ ಅಧಿಕಾರದ ಅವಧಿ ಸದಸ್ಯರು ಅಧಿಕಾರವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳಾಗಿರುತ್ತದೆ.

**ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಕರ್ತವ್ಯಗಳು ಮತ್ತು ಕಾರ್ಯಗಳು**

ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವು ತನ್ನದೇ ಆದಂಥ ಕರ್ತವ್ಯಗಳು ಮತ್ತು ಕಾರ್ಯಗಳನ್ನು ಈ ಮುಂದಿನ ದಾಖಲಿಸಲಾಗಿರುತ್ತದೆ. ಅವುಗಳೆಂದರೆ; ಸಂವಿಧಾನದ ಅಡಿಯಲ್ಲಿ ಅಥವಾ ಯಾವುದೇ ಕಾನೂನಿನ ಅಡಿಯಲ್ಲಿ ಜಾರಿಯಲ್ಲಿರುವ ಅಥವಾ ಸಕಾರದ ಯಾವುದೇ ಆದೇಶದಡಿಯಲ್ಲಿ ಪರಿಶಿಷ್ಟ ಪಂಗಡಗಳಿಗೆ ಒದಗಿಸಲಾದಂಥ ಸುರಕ್ಷತೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗೆಗೆ ತನಿಖೆ ಮತ್ತು ಮೇಲ್ವಿಚಾರಣೆ ಮಾಡುವುದು ಮತ್ತು ಅಂಥ ಸುರಕ್ಷತೆಗಳ ಕಾರ್ಯವನ್ನು ಮೌಲ್ಯಮಾಪನ ಮಾಡುವುದು. ಪರಿಶಿಷ್ಟ ಪಂಗಡದ ಹಕ್ಕುಗಳ ಅಭಾವ ಮತ್ತು ಸುರಕ್ಷತೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ದೂರುಗಳನ್ನು ವಿಚಾರಿಸುವುದು. ಪರಿಶಿಷ್ಟ ಪಂಗಡದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮತ್ತು ಸಲಹೆ ನೀಡಲು ಮತ್ತು ಕೇಂದ್ರ ಹಾಗೂ ಯಾವುದೇ ರಾಜ್ಯ ಸರ್ಕಾರಗಳ ಅಡಿಯಲ್ಲಿ ಅವರ ಅಭಿವೃದ್ಧಿಗೆ ಸಂಬಂಧಿಸಿದಂತೆ ಇರುವ ಪ್ರಗತಿಯನ್ನು ಮೌಲ್ಯಮಾಪನ ಮಾಡುವುದು. ಆಯೋಗವು ಸೂಕ್ತವೆಂದು ಪರಿಗಣಿಸಬಹುದಾದಂಥ ಇತರ ಸಮಯದಲ್ಲಿ ಆ ಸುರಕ್ಷತೆಗಳಿಗೆ ಸಂಬಂಧಿಸಿದಂತೆ ಇರುವ ಕಾರ್ಯದ ಬಗೆಗೆ ವರದಿಗಳನ್ನು ತಯಾರಿಸುವುದು, ಹಾಗೆಯೇ ಈ ವಾರ್ಷಿಕ ವರದಿಯನ್ನು ರಾಷ್ಟ್ರಾಧ್ಯಕ್ಷರ ಮುಂದೆ ಪ್ರಸ್ತುತ ಪಡಿಸುವುದು. ಪರಿಶಿಷ್ಟ ಪಂಗಡದವರ ರಕ್ಷಣೆ, ಕಲ್ಯಾಣ ಮತ್ತು ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಇತರ ಕ್ರಮಗಳು ಹಾಗೂ ಆ ಸುರಕ್ಷತೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೇಂದ್ರ ಮತ್ತು ಯಾವುದೇ ರಾಜ್ಯವು ತೆಗೆದುಕೊಳ್ಳಬೇಕಾದಂಥ ಕ್ರಮಗಳನ್ನು ವರದಿ ಮಾಡುವುದು.

ಸಂಸತ್ತು ಕಾಲಕಾಲಕ್ಕೆ ಮಾಡುವಂಥ ಯಾವುದೇ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟು ನಿಯಮದಂತೆ ನಿರ್ದಿಷ್ಟಪಡಿಸಿದಂತೆ ಪರಿಶಿಷ್ಟ ಪಂಗಡಗಳ ರಕ್ಷಣೆ, ಕಲ್ಯಾಣ ಹಾಗೂ ಅಭಿವೃದ್ಧಿಯಂಥ ಪ್ರಗತಿಗೆ ಸಂಬಂಧಿಸಿದಂತೆ ಇಂಥ ಇತರ ಕಾರ್ಯಗಳನ್ನು ನಿರ್ವಹಿಸುವುದು. ಈ ಮೇಲಿನ ಕಾರ್ಯಗಳೊಟ್ಟಿಗೆ ಪರಿಶಿಷ್ಟ ಪಂಗಡಗಳ ರಕ್ಷಣೆ, ಕಲ್ಯಾಣ, ಅಭಿವೃದ್ಧಿ ಹಾಗೂ ಪ್ರಗತಿಗೆ ಸಂಬಂಧಿಸಿದಂತೆ ಆಯೋಗವು ಈ ಕೆಳಗಿನ ಇತರ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ; ಸಣ್ಣ ಪ್ರಮಾಣದಲ್ಲಿನ ಅರಣ್ಯ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಮಾಲೀಕತ್ವದ ಹಕ್ಕುಗಳನ್ನು ನೀಡುವ ಕ್ರಮಗಳನ್ನು ತೆಗೆದುಕೊಳ್ಳುವುದು. ಕಾನೂನಿನ ಪ್ರಕಾರ; ಖನಿಜ ಸಂಪನ್ಮೂಲಗಳು, ಜನಸಂಪನ್ಮೂಲಗಳು, ಇತ್ಯಾದಿಗಳ ಮೇಲೆ ಬುಡಕಟ್ಟು ಸಮುದಾಯಗಳ ಹಕ್ಕುಗಳನ್ನು ಕಾಪಾಡಲು ತೆಗೆದುಕೊಳ್ಳಲೇಬೇಕಾದಂಥ ಕ್ರಮಗಳು; ಬುಡಕಟ್ಟು ಜನಾಂಗದವರ ಅಭಿವೃದ್ಧಿಗೆ ತೆಗೆದುಕೊಳ್ಳಬೇಕಾದಂಥ ಕ್ರಮಗಳು ಮತ್ತು ಹೆಚ್ಚು ಕಾರ್ಯಸಾಧ್ಯವಾದಂಥ ಜೀವನೋಪಾಯ ತಂತ್ರಗಳಿಗಾಗಿ ಕೆಲಸ ಮಾಡುವುದು. ಅಭಿವೃದ್ಧಿ ಯೋಜನೆಗಳಿಂದ ಸ್ಥಳಾಂತರಗೊಂಡಂಥ ಬುಡಕಟ್ಟು ಗುಂಪುಗಳಿಗೆ ಪರಿಹಾರ ಮತ್ತು ಪುನರ್‌ವಸತಿ ಕ್ರಮಗಳ ಪರಿಣಾಮಕಾರಿತ್ವವನ್ನು ಸುಧಾರಿಸಲು ತೆಗೆದುಕೊಳ್ಳಬೇಕಾದಂಥ ಕ್ರಮಗಳು; ಬುಡಕಟ್ಟು ಜನರನ್ನು ಭೂಮಿಯಿಂದ ದೂರವಿಡುವುದನ್ನು ತಡೆಯಲು ಮತ್ತು ಈಗಾಗಲೇ ಅನ್ಯಲೋಕದ ಪ್ರಕ್ರಿಯೇ ನಡೆದಿರುವ ಅಂಥ ಜನರನ್ನು ಪರಿಣಾಮಕಾರಿಯಾಗಿ ಪುನರ್ ವಸತಿ ಕಲ್ಪಿಸಿಕೊಡಲು ತೆಗೆದುಕೊಳ್ಳಬೇಕಾದಂಥ ಕ್ರಮಗಳು. ಕಾಡುಗಳನ್ನು ಸಂರಕ್ಷಿಸಲು ಮತ್ತು ಸಾಮಾಜಿಕ ಅರಣ್ಯೀಕರಣವನ್ನು ಕೈಗೊಳ್ಳಲು ಬುಡಕಟ್ಟು ಸಮುದಾಯಗಳ ಗರಿಷ್ಠ ಸಹಕಾರ ಮತ್ತು ಒಳಗೊಳ್ಳುವಿಕೆಯನ್ನು ತೆಗೆದುಕೊಳ್ಳಲು ತೆಗೆದುಕೊಳ್ಳಬೇಕಾದ ಕ್ರಮಗಳು; ಪಂಚಾಯಿತಿಗಳ ನಿಬಂಧನೆಗಳ (ಪರಿಶಿಷ್ಟ ಪ್ರದೇಶಗಳಿಗೆ ವಿಸ್ತರಣೆ) ಕಾಯಿದೆ–1996 (1996ರ 40) ಪೂರ್ಣ ಅನುಷ್ಠಾನವನ್ನು ಖಚಿಪಡಿಸಿಕೊಳ್ಳಲು ತೆಗೆದುಕೊಳ್ಳಬೇಕಾದಂಥ ಕ್ರಮಗಳು; ಬುಡಕಟ್ಟು ಜನಾಂಗದವರು ಕೃಷಿಯನ್ನು ಸ್ಥಳಾಂತರಿಸುವ ಅಭ್ಯಾಸವನ್ನು ಕಡಿಮೆ ಮಾಡಲು ಅಂತಿಮವಾಗಿ ತಡೆದು ಹಾಕಲು ತೆಗೆದುಕೊಳ್ಳಬೇಕಾದಂಥ ಕ್ರಮಗಳು ಭೂಮಿ ಮತ್ತು ಪರಿಸರದ ನಿರಂತರ ಅಶಕ್ತತೆ ಮತ್ತು ಅವನತಿಗೆ ಕಾರಣವಾಗುತ್ತವೆ ಎಂದು ತಿಳಿಸಿರುತ್ತವೆ.

**ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಅಧಿಕಾರಗಳು**

ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವು ನಾಗರಿಕ ನ್ಯಾಯಾಲಯದ ಮೊಕದ್ದೆಮೆಯನ್ನು ಪ್ರಯತ್ನಿಸುವಂಥ ಎಲ್ಲಾ ಅಧಿಕಾರಗಳನ್ನು ಹೊಂದಿದೆ. ಅಂದರೆ; ಷರತ್ತು 5ರ ಉಪಷರತ್ತು (ಬಿ)ನಲ್ಲಿ ಉಲ್ಲೇಖಿಸಲಾದಂಥ ಯಾವುದೇ ದೂರನ್ನು ವಿಚಾರಿಸಲು ಉಪ–ಷರತ್ತು (ಎ)ನಲ್ಲಿ ಉಲ್ಲೇಖಿಸಲಾದ ವಿಷಯಗಳನ್ನು ತನಿಖೆ ಮಾಡುವಾಗ ಹಾಗೂ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಣೆಯನ್ನು ಮಾಡುವಾಗ ಈ ಕೆಳಗಿನಂತಿರುವ ವಿಷಯಗಳನ್ನು ಕೂಡ ಹೊಂದಿರುತ್ತದೆ.

ಅವುಗಳೆಂದರೆ; ಭಾರತದ ಯಾವುದೇ ಭಾಗದಿಂದ ಯಾವುದೇ ವ್ಯಕ್ತಿಯ ಹಾಜರಾತಿಯನ್ನು ಕರೆಸುವುದು ಮತ್ತು ಜಾರಿಗೊಳಿಸುವುದು ಹಾಗೆಯೇ ಆ ವ್ಯಕ್ತಿಯನ್ನು ಪ್ರಮಾಣವಚನದಲ್ಲಿ ಪರೀಕ್ಷಿಸುವುದು; ಯಾವುದೇ ದಾಖಲೆಗಳ ಆವಿಷ್ಕಾರ ಮತ್ತು ಉತ್ಪಾದನೆಯ ಅಗತ್ಯವಿರುತ್ತದೆ. ಅಫಿಡೆವಿಟ್‌ಗಳಲ್ಲಿ ಸಾಕ್ಷ್ಯಗಳನ್ನು ಪಡೆಯುವುದು. ಯಾವುದೇ ನ್ಯಾಯಾಲಯದಿಂದ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ನಕಲನ್ನು ಕೋರುವುದು. ಸಾಕ್ಷಿಗಳು ಮತ್ತು ದಾಖಲೆಗಳ ಪರೀಕ್ಷೆಗೆ ಸಮನ್ಸ್ / ಸಂವಹನಗಳನ್ನು ನೀಡುವುದು. ರಾಷ್ಟ್ರಾಧ್ಯಕ್ಷರು ನಿರ್ಧರಿಸಬಹುದಾದ ಯಾವುದೇ ನಿಯಮದಂತೆ ವಿಷಯಗಳನ್ನು ತನಿಖೆ ಮತ್ತು ಪರೀಕ್ಷಿಸುವಂಥ ಅಧಿಕಾರವನ್ನು ಹೊಂದಿರುತ್ತದೆ.

ಹೀಗೆ, ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವು ಸಂವಿಧಾನದ 338ಎ ವಿಧಿ ಅನ್ವಯ ಸ್ಥಾಪಿಸಲ್ಪಟ್ಟು ಈ ಜನವರ್ಗಗಳ ಹಕ್ಕು–ಅಧಿಕಾರಗಳು ಉಲ್ಲಂಘನೆಯಾದಾಗ ಒಂದು ನಾಗರಿಕ ನ್ಯಾಯಾಲಯ ಹಾಗೂ ತನಿಖೆ ತಡವಾಗಿ ತನ್ನದೇ ಆದಂಥ ಕಾರ್ಯವನ್ನು ನಿರ್ವಹಿಸುವ ಮೂಲಕ ಅವರಿಗೆ ರಕ್ಷಣೆಯನ್ನು ನೀಡುತ್ತಿರುವ ಬಗೆಗೆ ಪ್ರಸ್ತುತ ಅಧ್ಯಾಯನದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ.

**ಹಿಂದುಳಿ ವರ್ಗಗಳ ರಾಷ್ಟ್ರೀಯ ಆಯೋಗ – 1993ನೇ ಆಗಸ್ಟ್ 14**

ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗದ ಐತಿಹಾಸಿಕ ಹಿನ್ನೆಲೆಯನ್ನು ಅವಲೋಕಿಸಿದಾಗ; ಅದು ಹಲವು ಹಂತಗಳನ್ನು ದಾಟಿ ಬಂದಿರುವುದು ಕಂಡುಬರುತ್ತದೆ. ಪ್ರಧಾನವಾಗಿ 1950 ಮತ್ತು 1970ರ ದಶಕದಲ್ಲಿ ಕ್ರಮವಾಗಿ ಕಾಕಾಲೆಲ್ಕರ್ ಮತ್ತು ಬಿ.ಪಿ.ಮಂಡಲ್ ಆಯೋಗವನ್ನು ಅಂದಿನ ಕೇಂದ್ರ ಸರ್ಕಾರಗಳು, ಹಿಂದುಳಿದ ವರ್ಗಗಳ ಆಯೋಗವೆಂದು ನೇಮಿಸಿರುತ್ತವೆ. ಇವುಗಳು ತಮ್ಮ ತಮ್ಮ ಉದ್ದೇಶಗಳಿಗೆ ಅನುಗುಣವಾಗಿ ಕಾರ್ಯವನ್ನು ನಿರ್ವಹಿಸಿ ವರದಿಗಳನ್ನು ಕಾಲಕಾಲಕ್ಕೆ ನೀಡಿರುತ್ತವೆ. ಆದರೆ, 1992ರಲ್ಲಿ ಇಂದ್ರಸಾಹ್ನಿ ಎಂಬುವರ ಪ್ರಕರಣವೊಂದು ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಿರುತ್ತದೆ. ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಯಾಲಯವು ಕೇಂದ್ರ ಸರ್ಕಾರಕ್ಕೆ ನಿರ್ದೇಶನವನ್ನು ನೀಡಿರುತ್ತದೆ. ಆ ನಿರ್ದೇಶನವೆನೆಂದರೆ; ಹಿಂದುಳಿದ ವರ್ಗಗಳ ಆಯೋಗಕ್ಕೆ ಒಂದು ಶಾಶ್ವತವಾದಂಥ ಸ್ವರೂಪವನ್ನು ನೀಡಬೇಕು. ಹಾಗೆಯೇ ಅದು ಹಿಂದುಳಿದ ವರ್ಗಗಳನ್ನು ರಕ್ಷಣೆಯ ಉದ್ದೇಶಕ್ಕಾಗಿ ವಿವಿಧ ವಿಷಯಗಳಲ್ಲಿ ಪ್ರಯೋಜನೆಗಳನ್ನು ಪಡೆದುಕೊಳ್ಳುವಂತೆ ಆಗಬೇಕು ಎಂದಿರುತ್ತದೆ. ಅದರಂತೆಯೇ ಅಂದಿನ ಕೇಂದ್ರ ಸರ್ಕಾರವು 1993ರಲ್ಲಿ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗವನ್ನು ಸ್ಥಾಪಿಸಿರುತ್ತದೆ. ಈ ಆಯೋಗವು ಪ್ರಧಾನವಾಗಿ ಹಿಂದುಳಿದ ವರ್ಗಗಳ ಹಿತಾಸಕ್ತಿಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಕಾಪಾಡುವ ಉದ್ದೇಶದಿಂದಲೇ ರಚಿತಗೊಂಡಿರುತ್ತದೆ.

ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗವು 1993ರಲ್ಲಿ ಸಂಸತ್ತಿನಿಂದ ಅಂಗೀಕರಗೊಂಡು ರಚಿತವಾದಾಗ ಶಾಸನ ಬದ್ಧವಾದ ಮಾನ್ಯತೆಯನ್ನು ಪಡೆದಿರುವುದಿಲ್ಲ. ಆ ಕಾರಣವಾಗಿಯೇ 2017ರಲ್ಲಿ

ಸಂಸತ್ತಿನಲ್ಲಿ ಮಸೂತಿಯನ್ನು ಮಂಡಿಸಿ ಸಂವಿಧಾನಕ್ಕೆ 102ನೇ ತಿದ್ದುಪಡಿಯನ್ನು ತರುವ ಮೂಲಕ ಈ ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ ಶಾಶ್ವತವಾದಂಥ ಶಾಸನ ಬದ್ಧವಾದಂಥ ಸ್ಥಾನಮಾನವು ದೊರಕಿಸುವಂತೆ ಮಾಡಲಾಗಿರುತ್ತದೆ. 1993ರ ಕಾಯಿದೆ ಅಪ್ರಸ್ತುತವಾಗಿರುತ್ತದೆ. 2018ನೇ ಆಗಸ್ಟ್‌ನಲ್ಲಿ ಈ ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗದ ಮಸೂದೆಯ ರಾಷ್ಟ್ರಾಧ್ಯಕ್ಷರ ಒಪ್ಪಿಗೆಯನ್ನು ಪಡೆದು ಶಾಸನಬದ್ಧ ಆಯೋಗವಾಗಿ ರೂಪುಗೊಂಡು ತನ್ನ ಕಾರ್ಯವಿಧಾನವನ್ನು ನಿರ್ವಹಿಸುತ್ತಿದೆ.

ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗವು 2018ನೇ 102ನೇ ಸಂವಿಧಾನದ ತಿದ್ದುಪಡಿ ಕಾಯಿದೆಯ ಮೂಲಕವಾಗಿ ರಾಷ್ಟ್ರೀಯ ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗ ಸಂವಿಧಾನಿಕ ಸ್ಥಾನಮಾನವನ್ನು ನೀಡುತ್ತವೆ. ಇದು ಪ್ರಧಾನವಾಗಿ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಅವರ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ವಿಷಯಗಳಿಗೆ ಸಂಬಂಧಿಸಿದಂತೆ ಬರುವ ದೂರುಗಳು ಮತ್ತು ಅವರ ಕಲ್ಯಾಣ ಕ್ರಮಗಳನ್ನು ಪರಿಶೀಲಿಸುವಂಥ ಅಧಿಕಾರವನ್ನು ಇಂದು ಹೊಂದಿರುತ್ತದೆ. ಈ ಹಿಂದೆ ಈ ಆಯೋಗವು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಡಿಯಲ್ಲಿ ಶಾಸನಬದ್ಧ ಸಂಸ್ಥೆಯಾಗಿ ಕಾರ್ಯವನ್ನು ನಿರ್ವಹಿಸಿತ್ತು. ಆದರೆ ಪ್ರಸುತ ಒಂದು ಪ್ರತ್ಯೇಕ ಸಾಂವಿಧಾನಿಕ ತನಿಖಾ ಸಂಸ್ಥೆಯಾಗಿ ತನ್ನ ಕಾರ್ಯನಿರ್ವಹಿಸುತ್ತಿದೆ.

**ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗದ ರಚನೆ**

ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗವು ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಇತರ ಮೂರು ಸದಸ್ಯರನ್ನು ಒಳಗೊಂಡಂತೆ ಐದು ಜನ ಸದಸ್ಯರನ್ನು ಒಳಗೊಂಡು ರಚಿತವಾಗಿರುತ್ತದೆ. ಈ ಆಯೋಗಕ್ಕೆ ಸದಸ್ಯರುಗಳನ್ನು ಕೇಂದ್ರ ಸರ್ಕಾರದ ಶಿಫಾರಸ್ಸಿನ ಮೇರೆಗೆ ರಾಷ್ಟ್ರಾಧ್ಯಕ್ಷರು ನಾಮನಿರ್ದೇಶನವನ್ನು ಮಾಡುತ್ತಾರೆ. ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಇರುವ ಸಾಂವಿಧಾನಿಕ ನಿಬಂಧನೆಗಳೆಂದರೆ; ಸಂವಿಧಾನದ 340ನೇ ವಿಧಿಯು, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸುವುದು, ಅವರ ಹಿಂದುಳಿದ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವರು ಎದುರಿಸುತ್ತಿರುವ ತೊಂದರೆಗಳನ್ನು ತಎಗೆದುಹಾಕಲು ಶಿಫಾರಸ್ಸುಗಳನ್ನು ಮಾಡುವ ಅಗತ್ಯತೆಯ ಬಗೆಗೆ ವ್ಯವಹರಿಸುತ್ತದೆ. ಸಂವಿಧಾನದ 102ನೇ ತಿದ್ದುಪಡಿ ಕಾಯಿದೆಯ ಪ್ರಕಾರ 338ಬಿ ಮತ್ತು 342ಎ ಎಂಬಂಥ ಎರಡು ಹೊಸ ವಿಧಾನಗಳನ್ನು ಸೇರ್ಪಡೆಗೊಳಿಸಲಾಗಿದೆ. ಸಂವಿಧಾನದ 366ನೇ ವಿಧಿಗೆ ಈ ತಿದ್ದುಪಡಿಯು ಬದಲಾವಣೆಗಳನ್ನು ತಂದಿರುತ್ತದೆ. ಸಂವಿಧಾನದ 338ನೇ ವಿಧಿ ಅನ್ವಯ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ದೂರುಗಳು ಮತ್ತು ಕಲ್ಯಾಣ ಕ್ರಮಗಳನ್ನು ಪರಿಶೀಲಿಸಲು ಅಧಿಕಾರವನ್ನು ನೀಡುತ್ತದೆ. ಸಂವಿಧನದ 342ನೇ ವಿಧಿಯು ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ

ವರ್ಗಗಳನ್ನು ನಿರ್ಧಿಷ್ಟಪಡಿಸಲು ರಾಷ್ಟ್ರಾಧ್ಯಾಕ್ಷರಿಗೆ ಅಧಿಕಾರವನ್ನು ನೀಡಿರುತ್ತದೆ. ಹಾಗೆಯೇ ಸಂಬಂಧಪಟ್ಟ ರಾಜ್ಯಪಾಲರೊಂದಿಗೆ ಸಮಾಲೋಚಿಸಿ ಅವರು ಇದನ್ನು ಮಾಡಬಹುದು. ಆದಾಗ್ಯೂ ಹಿಂದುಳಿದ ವರ್ಗಗಳ ಪಟ್ಟಿಯನ್ನು ತಿದ್ದುಪಡಿ ಮಾಡಬೇಕಾದರೆ, ಸಂಸತ್ತು ಕಾಲಕಾಲಕ್ಕೆ ಜಾರಿಗೊಳಿಸುವ ಕಾನೂನು ಹೆಚ್ಚು ಅಗತ್ಯವಾಗಿರುತ್ತದೆ.

**ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗದ ಅಧಿಕಾರ ಮತ್ತು ಕಾರ್ಯಗಳು**

ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗವು ತನ್ನ ಕಾರ್ಯವಿಧಾನದಲ್ಲಿ ಈ ಮುಂದಿನಂತೆ ದಾಖಲಿಸಿರುವಂಥ ಅಧಿಕಾರಗಳು ಮತ್ತು ಕಾರ್ಯಗಳನ್ನು ಹೊಂದಿರುತ್ತದೆ. ಅವುಗಳೆಂದರೆ; ಈ ಆಯೋಗವು ಸಂವಿಧನದ ಅಡಿಯಲ್ಲಿ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಒದಗಿಸಲಾದ ಸುರಕ್ಷತೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ತನಿಖೆ ಮಾಡುತ್ತದೆ ಮತ್ತು ಮೇಲ್ವಿಚಾರಣೆಯನ್ನು ಮಾಡುತ್ತದೆ. ಈ ಆಯೋಗವು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯಲ್ಲಿ ಭಾಗವಹಿಸುತ್ತದೆ. ಹಾಗೆಯೇ ಅದಕ್ಕೆ ಸಂಬಂಧಿಸಿದಂತೆ ಸಲಹೆ–ಸೂಚನೆಗಳನ್ನು ನೀಡುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಡಿಯಲ್ಲಿ ಅವರ ಅಭಿವೃದ್ಧಿಯ ಪ್ರಗತಿಯನ್ನು ಮೌಲ್ಯಮಾಪನವನ್ನು ಮಾಡುತ್ತದೆ. ಈ ಆಯೋಗವು ರಾಷ್ಟ್ರಾಧ್ಯಕ್ಷರಿಗೆ ಸೂಕ್ತವೆನಿಸಿದಾಗ; ವಾರ್ಷಿಕವಾಗಿ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಇತರ ಸಮಯಗಳಲ್ಲಿ ಅವರ ಸುರಕ್ಷತೆಗಳ ಕಾರ್ಯದ ಬಗೆಗೆ ವರದಿಯನ್ನು ತಯಾರಿಸಿ ಸಲ್ಲಿಸುವುದು. ಈ ಆಯೋಗವು ಸಲ್ಲಿಸಿದಂಥ ವರದಿಯನ್ನು ರಾಷ್ಟ್ರಾಧ್ಯಕ್ಷರು ಪ್ರತಿ ಸಂಸತ್ತಿನ ಮುಂದೆ ಮಂಡಿಸುವರು. ಅಂಥ ಯಾವುದೇ ವರದಿ ಅಥವಾ ಅದರ ಯಾವುದೇ ಭಾಗವು ಯಾವುದೇ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಿದೆ. ಅಂಥ ವರದಿಯ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ರವಾನಿಸಲಾಗುತ್ತದೆ. ಈ ಆಯೋಗವು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ರಕ್ಷಣೆ, ಕಲ್ಯಾಣ, ಅಭಿವೃದ್ಧಿ ಮತ್ತು ಪ್ರಗತಿಗೆ ಸಂಬಂಧಿಸಿದಂತೆ ರಾಷ್ಟ್ರಾಧ್ಯಕ್ಷರಂತೆ, ಸಂಸತ್ತು ಮಾಡಿದಂಥ ಯಾವುದೇ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟಂಥ ನಿಯಮವನ್ನು ನಿರ್ಧಿಷ್ಟಪಡಿಸಬೇಕು. ಮೊಕದ್ದೆಯನ್ನು ಪ್ರಯತ್ನಿಸಿದಾಗ ಇದು ನಾಗರಿಕ ನ್ಯಾಯಾಲಯದ ಎಲ್ಲಾ ಅಧಿಕಾರಿಗಳನ್ನು ಹೊಂದಿರುತ್ತದೆ.

**ಹೊಸ ಆಯೋಗವು ಹಿಂದಿನ ಆವೃತ್ತಿಗಿಂತ ಭಿನ್ನವಾಗಿದೆ. ಹೇಗೆಂದರೆ;** ಹಿಂದುಳಿದ ವರ್ಗಗಳಿಗೆ ಮೀಸಲಾತಿಯೂ ಹೆಚ್ಚುವರಿಯಾಗಿ ಅಭಿವೃದ್ಧಿ ಹೊಂದುವ ಅಗತ್ಯವಿದೆ ಎಂದು ಈ ಹೊಸ ಕಾಯಿದೆ ಗುರುತಿಸಿದೆ. ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿ ಮತ್ತು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹೊಸ ಕಾಯಿದೆಯಲ್ಲಿ ಹಿಂದುಳಿದ ವರ್ಗಗಳ ಆಯೋಗದ ಪಾತ್ರಕ್ಕೆ ಅವಕಾಶವಿದೆ. ಈ

ಹೊಸ ಹಿಂದುಳಿದ ವರ್ಗಗಳ ಆಯೋಗಕ್ಕೆ ಹಿಂದುಳಿದ ವರ್ಗಗಳ ಕುಂದು–ಕೊರತೆಯ ಪರಿಹಾರದ ಹೆಚ್ಚುವರಿ ಕಾರ್ಯವನ್ನು ವಹಿಸಲಾಗಿದೆ. 342ನೇ(ಎ) ವಿಧಿ ಅನ್ವಯ ಹಿಂದುಳಿದವರ ಪಟ್ಟಿಯಲ್ಲಿ ಯಾವುದೇ ಸಮುದಾಯವನ್ನು ಸೇರಿಸಲು ಅಥವಾ ತೆಗೆದುಹಾಕಲು ಸಂಸತ್ತಿನ ಒಪ್ಪಿಗೆಯನ್ನು ಪಡೆದುಕೊಳ್ಳುವುದು ಕಡ್ಡಾಯವಾಗಿದೆ. ಇದು ಹೆಚ್ಚಿನ ಪಾರದರ್ಶಕತೆಯನ್ನು ಪರಿಚಯಿಸುತ್ತದೆ. ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮತ್ತು ಮೀಸಲಾತಿಯಿಂದ ಹೊರತಾಗಿ, ಅಭಿವೃದ್ಧಿ ಮತ್ತು ಕಲ್ಯಾಣದ ಎಲ್ಲಾ ನಿಯತಾಂಕಗಳಲ್ಲಿ ಸಮಾನತೆಯ ಕಡೆಗೆ ಪ್ರತಿ ಸಮುದಾಯದ, ಸಮಗ್ರ ಅಭಿವೃದ್ಧಿ ಮತ್ತು ಪ್ರಗತಿಯ ಅಗತ್ಯವಿದೆ ಎಂದು ಸೂಚಿಸಿರುತ್ತದೆ. ಹೀಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹೊಸ ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗವು ಹಿಂದುಳಿದ ವರ್ಗಗಳಿಗೆ ಮಾನವ ಹಕ್ಕುಗಳ ಉಲ್ಲಂಘನೆಯಾದಾಗ ಒಂದು ನಾಗರಿಕ ನ್ಯಾಯಾಲಯವಾಗಿ ತನ್ನದೇ ಕಾರ್ಯವನ್ನು ನಿರ್ವಹಿಸುವ ಮೂಲಕ ಮಾನವ ಹಕ್ಕುಗಳನ್ನು ರಕ್ಷಿಸುವಲ್ಲಿ ಇದರ ಪಾತ್ರವೂ ಹಿರಿದಾದದಷ್ಟು ಎಂಬುದನ್ನು ಅಧ್ಯಯನವು ಈ ಮೂಲಕವಾಗಿಯೇ ಗುರುತಿಸಿರುತ್ತದೆ.

**ಗ್ರಂಥಋಣ**


1. ರಾಜಶೇಖರ. ಎಚ್.ಎಂ, ಭಾರತ ಸಂವಿಧಾನ ಮತ್ತು ಸರ್ಕಾರ, 2015
2. First Annual Report – 2004 - 2005, National Commission for Scheduled Castes, 2005
3. Gezzet of India, Government of India, The Scheduled Caste and The Scheduled Tribes (Prevention of Atrocitics) Act-1989
4. Jain.M.P. Indian Constitutional Law, 1987
5. National Commission for Backward Classes Act 1993
6. National Commission for Scheduled Castes, 2015
7. National Commission for Scheduled Tribes, Fifth Report, 2009-10
8. Sirivella Prasad, National Coalition for Strengthening SC/ST Prevention of Actrocitics Act – 1989
9. The Gazette of India, Govt of India, Sept, 13th 1993
10. The Scheduled Castes and Scheduled Tribes (Prevention of Atrocities) Act, 1989, 11th September, 1989